# ವಾರ್ಡ್ ಸಭೆ ಸಂಖ್ಯೆ.20

ದಿನಾಂಕ: 16.10.2021 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
2. ಶ್ರೀ ಕೆ.ಬಿ ರಾಮದಾಸಪ್ಪ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರ ಉಪವಿಭಾಗ.
3. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
4. ಶ್ರೀಮತಿ ಪ್ರೇಮ ಸದಸ್ಯರು.
5. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
6. ಕುಮಾರಿ ಕಮಲ ಸದಸ್ಯರು.
7. ಶ್ರೀ ರಾಜೇಶ್ ಸದಸ್ಯರು.
8. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
9. ಶ್ರೀ ನಾಗೇಂದ್ರ ಸದಸ್ಯರು.
10. ಶ್ರೀ ಗೋಪಿ ಸದಸ್ಯರು.
11. ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
13. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
14. ಶ್ರೀ ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
16. ಶ್ರೀ ಮಲ್ಲಯ್ಯ, ವಲಯ ಅರಣ್ಯಾ ಸಂರಕ್ಷಣಾ ಇಲಾಖೆ, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
17. ಶ್ರೀ ಲೋಕೇಶ್, ಪಶು ಸಂಗೋಪನ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
18. ಶ್ರೀ ರಾಜೇಶ್ ಮಾರ್ಷಲ್, ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ.
19. ಶ್ರೀ ದೀಪಕ್ ಗಣಕಯಂತ್ರ ನಿರ್ವಾಹಕರು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ,

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ಸದಸ್ಯರು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರಕ್ಕೆ ಸಂಬಂಧಿಸಿದವರು ಸಭೆಗೆ ಮಾಹಿತಿ ತಿಳಿಸಿದರು. | – |
| 4. | ಶ್ರೀ ಗೋಪಿ ಸದಸ್ಯರು ರವರು ಸೋಮೇಶ್ವರನಗರದಲ್ಲಿ ಚರಂಡಿ ಕಾಮಗಾರಿ ನಡೆಯುತ್ತಿದ್ದು ರಸ್ತೆಯ ಎರಡು ಬದಿಯಲ್ಲಿ ಚರಂಡಿ ಕಾಮಗಾರಿಯನ್ನು ನಿರ್ವಹಿಸುತ್ತಿರುತ್ತಾರೆ ಇದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟ ಗುತ್ತಿಗೆದಾರರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | – |

Scanned with CamScanner

| | | |
|---|---|---|
| 5. | ಶ್ರೀ ನಾಗೇಂದ್ರ ಸದಸ್ಯರು ರವರು ಬೋರ್‌ವೆಲ್ ಪ್ಯಾನಲ್‌ಗಳ ದುರಸ್ಥಿ ಬಗ್ಗೆ ಕೇಳಿದರು. ಇದಕ್ಕೆ ಮಾನ್ಯ ಕಾರ್ಯದರ್ಶಿಗಳು ಸಂಬಂದಪಟ್ಟ ಇಲಾಖೆ ರವರಿಗೆ ನೋಟೀಸ್ ನೀಡಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್. ಬಿ ಇಲಾಖೆ. |
| 6. | ಶ್ರೀ ನಾಗೇಂದ್ರ ಸದಸ್ಯರು ರವರು ಬೀದಿ ದೀಪಗಳು, ಐ-ಮಾಸ್ಟ್ ಹಾಗೂ ಟೈಮರ್‌ಗಳನ್ನು ಅಳವಡಿಸುವ ಬಗ್ಗೆ ಕೇಳಿದರು. ಇದಕ್ಕೆ ಮಾನ್ಯ ಕಾರ್ಯದರ್ಶಿಗಳು ಸಂಬಂದಪಟ್ಟ ಇಲಾಖೆ ರವರು ಸಭೆಗೆ ಹಾಜರಿಲ್ಲದ ಕಾರಣ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಬೀದಿ ದೀಪಗಳು, ಐ-ಮಾಸ್ಟ್ ಹಾಗೂ ಟೈಮರ್‌ಗಳನ್ನು ಅಳವಡಿಸಲು ಸೂಚಿಸದರು. | ಬೀದಿ ದೀಪಗಳ ನಿರ್ವಹಣೆ |
| 7. | ಶ್ರೀ ನಾಗೇಂದ್ರ ಸದಸ್ಯರು ರವರು ಮಾರ್ಷಲ್ಸ್‌ರವರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್ ಮಾಹಿತಿ ಕೇಳಿದರು ಹಾಗೂ ಬ್ಲಾಕ್ ಸ್ಪಾಟ್‌ಗನ್ನು ತೆರವುಗೊಳಿಸಲು ಕೋರಿದರು. ಶ್ರೀ ರಾಜೇಶ್ ಮಾರ್ಷಲ್ ರವರು ಮಾಹಿತಿ ನೀಡಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 8. | ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು ರವರು ರಕ್ಷ ಆಸ್ಪತ್ರೆ ರಸ್ತೆಯ ಹತ್ತಿರ ಇರುವ ಬ್ಲಾಕ್ ಸ್ಪಾಟ್ ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಮಾರ್ಷಲ್ ರವರಿಗೆ ಬ್ಲಾಕ್ ಸ್ಪಾಟ್ ಸ್ಥಳದಲ್ಲಿ ಇದ್ದು ಕಸ ಹಾಕುವರಿಗೆ ದಂಡ ವಿಧಿಸಲು ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ವಿಜಯಾನಂದನಗರದ ಒಳಚರಂಡಿ ವ್ಯವಸ್ಥೆಯ ಸರ್ವೆ ರಿಪೋರ್ಟ್ 3 ದಿನಗಳೊಳಗೆ ನೀಡಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್. ಬಿ ಇಲಾಖೆ |
| 10. | ಶ್ರೀ ಜಯಪಾಲ್ ರವರು ಗೌತಮನಗರದ ಒಳಚರಂಡಿಯನ್ನು ಹೊಸದಾಗಿ ನಿರ್ಮಾಣ ಮಾಡಲು ಕೋರಿದರು. ಇದಕ್ಕೆ ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್. ಬಿ ಇಲಾಖೆ |
| 11. | ಶ್ರೀ ಮಲ್ಲಪ್ಪ ಸಾರ್ವಜನಿಕರು ಅವರ ಮನೆಯ ಹತ್ತಿರ ಒಳ ಚರಂಡಿಯಲ್ಲಿ ನೀರು ಹಿಂದುರುಗುತ್ತಿರುತ್ತದೆ ಎಂದು ತಿಳಿಸಿದರು. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್. ಬಿ ಇಲಾಖೆ |
| 12. | ಶ್ರೀಮತಿ ಮಹಾಲಕ್ಷ್ಮೀ ಹಾಗೂ ಶ್ರೀ ಜಯಪಾಲ್ ರವರು ಸಿಸಿ ಕ್ಯಾಮರಗಳನ್ನು ಅಳವಡಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ ಶ್ರೀಘ್ರದಲ್ಲೇ ಅಳವಡಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ.44 |
| 13. | ಸಾರ್ವಜನಿಕರು ಆಟೋಗಳು ಕಸ ತೆಗೆದುಕೊಂಡು ಹೋಗಲು ತಡವಾಗಿ ಬರುತ್ತಿರುತ್ತವೆ ಎಂದು ತಿಳಿಸಿದರು. ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಸಮಸ್ಯೆ ವಿವರಿಸಿ ಪರಿಹರಿಸಲಾಗುವುದು ಎಂದು ತಿಳಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 14. | ಸಾರ್ವಜನಿಕರು ಶ್ರೀಕಂಠೇಶ್ವರನಗರದ 2ನೇ ಮುಖ್ಯರಸ್ತೆಯಲ್ಲಿ ವಿದ್ಯುತ್ ಕಂಬ ವಾಲಿರುವುದಾಗಿ ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟ್ ಬೆಸ್ಕಾಂ ಅಧಿಕಾರಿಗಳಿಗೆ ವಿದ್ಯುತ್‌ಕಂಬವನ್ನು ತೆರವುಗೊಳಿಸಲು ಸೂಚಿಸಿದರು. | ಬೆಸ್ಕಾಂ ಇಲಾಖೆ |
| 15. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | - |

ಕಾರ್ಯದರ್ಶಿ

18/10/21

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44

ಮಾರಪ್ಪನಪಾಳ್ಯ

Scanned with CamScanner